ಅ) ರೈತರು ತಾವು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಮಧ್ಯವರ್ತಿಗಳಿಲ್ಲದೇ ನೇರವಾಗಿ ಗ್ರಾಹಕರಿಗೆ ಮಾರಾಟಮಾಡಲು ಎಲ್ಲಾ ಸೌಲಭ್ಯಗಳನ್ನು ಒದಗಿಸುವ ರೈತರ ಸಂತೆಗಳನ್ನು ಸ್ಥಾಪಿಸುವ ಬಗ್ಗೆ ಯೋಜನೆಯನ್ನು ರೂಪಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದ ಕೃಷಿಕರ ಸಮಸ್ಯೆಗಳು.

4162(4550) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಕೃಷಿಕರ ಸಮಸ್ಯೆ ಬಗ್ಗೆ ಸರ್ಕಾರ ಅಧ್ಯಯನ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇವರೆವಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :—

ಅ) ಹೌದು

ಆ) ರೈತರ ಸಮಸ್ಯೆಗಳ ಅಧ್ಯಯನ ಕುರಿತು ವಿವಿಧ ಸಮಿತಿಗಳ ಪೈಕಿ ಕೃಷಿ ಉತ್ಪಾದನೆಯಲ್ಲಿನ ಸ್ಥಗಿತತೆ ಕುರಿತು ಅಧ್ಯಯನ ಮಾಡಲು ಮತ್ತು ಸೂಕ್ತ ಪರಿಹಾರ ಕ್ರಮಗಳನ್ನು ಸೂಚಿಸಲು ರಾಜ್ಯ ಸರ್ಕಾರವು ಶ್ರೀ ಟಿ.ಆರ್. ಸತೀಶ್ ಚಂದ್ರನ್ ನೇತೃತ್ವದ ತಜ್ಞ ಸಮಿತಿಯನ್ನು 1992ರಲ್ಲಿ ರಚಿಸಿತ್ತು ಈ ಸಮಿತಿಯು 1994ರಲ್ಲಿ ತನ್ನ ವರದಿ ಸಲ್ಲಿಸಿದೆ.

ಸಮಿತಿಯ ಸಲಹೆಗಳನ್ವಯ ಮೇ 1995ರಲ್ಲಿ ಕೃಷಿ ಇಲಾಖೆಯನ್ನು ಸರ್ಕಾರವು ಪುನರ್ ಸಂಘಟಿಸಿತು. ದಿ: 1-1-2000 ರಿಂದ ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ರಚಿಸಲಾಯಿತು. ರೈತ ಸಮುದಾಯದ ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ ಕೃಷಿ ಇಲಾಖೆಯನ್ನು ಪುನಃ 1-7-2000 ರಂದು ಮರು ಸಂಘಟಿಸಲಾಗಿದೆ.

ರಸ್ತೆ ತೆರಿಗೆ ಬಗ್ಗೆ.

4164(4551) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಾಹನಗಳಿಂದ ರಸ್ತೆ ಸಾರಿಗೆ ಎಂದು ಸರ್ಕಾರಕ್ಕೆ ಪಾವತಿಯಾಗುವ ಹಣದ ಮೊತ್ತವೆಷ್ಟು?

ಆ) ಈ ರಸ್ತೆ ತೆರಿಗೆ ಹಣವನ್ನು ಯಾವುದಕ್ಕೆ ಉಪಯೋಗಿಸಲಾಗುವುದು?

ಇ) ರಸ್ತೆ ತೆರಿಗೆ ಪಾವತಿ ಮಾಡಿದವರಿಗೆ ಒದಗಿಸುತ್ತಿರುವ ಸೌಲಭ್ಯಗಳು ಯಾವುದು?